ಭಟ್ಟರ್ ಸ್ಕಾಚ್

● ಕಿ.ನಾಗರಾಜಯ್ಯ, ಬೆಂಗಳೂರು
ಭಟ್ರೇ, ಪ್ರೀತಿ ಮಾತ್ರ ಪವಿತ್ರ ಅಂತಾರಲ್ಲ?
- ಕಾಮವೂ ಪವಿತ್ರ ಅಂದ್ರೆ ಯಾರೂ ಪ್ರೂವ್ ಮಾಡು ಅಂತ ಹೇಳೊಲ್ಲ ಬಿಡು!

● ಗಣೇಶ ರಾವ್, ತುಮಕೂರು
ಭಟ್ರೇ, ನಮ್ಮ ಆಚಾರ-ವಿಚಾರದಲ್ಲಿ ಬದಲಾವಣೆ ಆಗಬೇಕು ಅಂತ ಅನಿಸುವುದಿಲ್ಲವಾ?
- ಹೂಂ ಅನಿಸುತ್ತೆ.. ಮದ್ವೆ ನಂತರ ಗಂಡ, ಹೆಂಡತಿ ಮನೆಯಲ್ಲೇ ಉಳಿಯಬೇಕು ಅಂತ ಇರಬೇಕು ಎಂಬ ರೂಲ್ ಮಾಡಬೇಕಿತ್ತು!

● ಮಹಾದೇವ ಗುರಾಣಿ, ಹುಬ್ಬಳ್ಳಿ
ಸಾರ್, ಉರುಳು ಸೇವೆಯನ್ನು ಎಲ್ಲಾದರೂ ಮಾಡಬಹುದಾ?
- ಎಲ್ಲೆಲ್ಲಾದರೂ ಮಾಡ್ತಾರೆ ಅಂತಾನೆ ಅದನ್ನು ದೇವಸ್ಥಾನಕ್ಕೆ ಸೀಮಿತ ಮಾಡಿರೋದು!

● ಸುನಯನ ಶ್ರೀ, (ಇಮೇಲ್ ಮೂಲಕ)
ರಾಹುಲ್ ಗಾಂಧಿಗೆ ಯಾರಾದರೂ ಬುದ್ಧಿಯನ್ನು ಬಾಡಿಗೆಗೆ ಕೊಡಬಹುದಿತ್ತಲ್ಲವಾ?
- ಬಾಡಿಗೆಗೆ ಪಡೆದೇ ಆತ ಹಾಗೆ ಆಡ್ತಿರಬಹುದಾ?!

● ಎಲ್.ವಿ.ಜೀವನ್, ದಾವಣಗೆರೆ
ಭಟ್ರೇ, ಜೀವನವನ್ನು ಇಡಿಯಾಗಿ ಅನುಭವಿಸಬೇಕು ಅಂತಾರಲ್ಲ?
- ಈ ಮಾತನ್ನು ಜೀವನಕ್ಕೆ ಸೀಮಿತಗೊಳಿಸಿದ್ದು ಒಳ್ಳೆಯದಾಯ್ತು.. ಹಲಸಿನಹಣ್ಣು, ಕಲ್ಲಂಗಡಿಯನ್ನು ಪೂರ್ತಿ ಅನುಭವಿಸಿ ಎನ್ನಲಿಲ್ಲವಲ್ಲ?!

● ದಿವಾಕರ ಹೆಗಡೆ, ಶಿರಸಿ
ಭಟ್ರೇ, ಚುನಾವಣೆಗೆ ನಿಲ್ಲುವವರೆಲ್ಲ ತಾವೇ ಗೆಲ್ಲೋದು ಅಂತಾರಲ್ಲ?
- ಅಂಥವರಿಗೆ ಮೊದಲು ಟಿಕೆಟ್ ಗಿಟ್ಟಿಸಿಕೊ ಎನ್ನಬಾರದೇ?!

● ಚೆನ್ನಯ್ಯ ಹೊಸದುರ್ಗ, ಹೊಸದುರ್ಗ
ಭಟ್ರೇ, ಪ್ರೀತಿಯನ್ನು ನದಿಗೆ ಹೋಲಿಸುತ್ತಾರಲ್ಲ?
- ತೀರಾ ಚರಂಡಿ ನೀರಿಗೆ ಹೋಲಿಸುವುದು ಸಭ್ಯತೆ ಅಲ್ಲ!

● ಪರಮೇಶ್ವರ ಎಲ್.ಪಿ., ಶಿವಮೊಗ್ಗ
ಭಟ್ರೇ, ಹಬ್ಬದ ದಿನ ತಲೆಗೆ ಎಣ್ಣೆ ಹಚ್ಚಿ ಸ್ನಾನ ಮಾಡಬೇಕು ಅಂತಾರಲ್ಲ?
- ಮಲೆನಾಡ ಕಡೆ ಎಮ್ಮೆಗಳನ್ನು ತೊಳೆಸೋದೂ ಅದೇ ಹಬ್ಬದ ದಿನದಂದೇ ಅಲ್ವಾ ಪರಮೇಶು!

● ನ.ಚ.ತ್ಯಾಗರಾಜ, (ಇಮೇಲ್ ಮೂಲಕ)
ಭಟ್ರೇ, ಪ್ರೇಮಪತ್ರದಲ್ಲಿ ಕರಡು ದೋಷ ಇರುವುದಿಲ್ಲವಲ್ಲ?
- ಪ್ರೀತಿಯಲ್ಲಿ ಏನಿದ್ದರೂ ಕುರುಡು ದೋಷ!

● ಚೈತನ್ಯ, ಸಾಗರ
ಭಟ್ರೇ, ಆಕೆ ನಗ್ತಾನೂ ಇಲ್ಲ, ನೋಡ್ತಾನೂ ಇಲ್ಲ?
- ನಿನ್ನನ್ನು ಕನ್ನಡ ಸಿನಿಮಾ ಎಂದು ಭಾವಿಸಿದಳಾ ?!

ಉಚಿತಗಳು; ದೇಶದ ಸರ್ವನಾಶ ಗ್ಯಾರಂಟಿ!

ಕ್ವಾರ್ಟರ್ ಎಣ್ಣೆಗೆ, ಹೊಟ್ಟೆಪಾಡಿಗೆ ಪಿಕ್‌ಪಾಕೆಟ್, ಕಳ್ಳತನ, ದರೋಡೆ, ಕೊಲೆಗಳಾಗುತ್ತಿದ್ದವು. ಆಗ ಇಂಥ ಉಚಿತ ಗ್ಯಾರೆಂಟಿಗಳು ಲಭಿಸಿದ್ದರೆ ಒಂದಷ್ಟು ಅಪರಾಧ ಪ್ರಮಾಣಗಳು ಕಡಿಮೆಯಾಗುತಿತ್ತೇನೋ? ಆದರೆ ಈಗಿನ ಯುವಕರಿಗೆ ಆಪಲ್‌ಫೋನು, ಕೆಟಿಎಂ ಬೈಕು, ಡಿಯೋಡ್ರೆಂಟು, ಕೂಲಿಂಗ್‌ಗ್ಲಾಸು, ಇಂಪೋರ್ಟೆಡ್ ಜಾಕೆಟ್‌ಗಳು ಬೇಕು.

ಹಂಪಿ ಎಕ್ಸ್‌ಪ್ರೆಸ್

ದೇವಿ ಮಹೇಶ್ವರ ಹಂಪಿನಾಯ್ಡು

1336hampiexpress1509@gmail.com

ಸಾಮಾಜಿಕ ಜಾಲತಾಣಗಳಲ್ಲಿ ನಟ ಉಪೇಂದ್ರ ಸಂದರ್ಶನದ ವಿಡಿಯೋಗಳು ಬಹಳ ಸದ್ದು ಮಾಡುತ್ತಿವೆ. ಹೊಲಸು ರಾಜಕಾರಣ, ದೈತ್ಯ ಭ್ರಷ್ಟಾಚಾರದಲ್ಲಿ ಪ್ರಜ್ಞೆ ಕಳೆದುಕೊಂಡಿರುವ 'ಸತ್ತ' ಪ್ರಜೆಗಳನ್ನು ಬಡಿದೆಬ್ಬಿಸಲು ತನ್ನದೇ ಐಡಿಯಾಗಳಿಂದ ಪ್ರಜಾಕೀಯ ಎಂಬ ಪರಿಕಲ್ಪನೆಯನ್ನು ಹುಟ್ಟು ಹಾಕಿದ್ದಾರೆ ಉಪೇಂದ್ರ. ಈ ಸಂದರ್ಶನಗಳಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳಲ್ಲದೇ, ಮಾಧ್ಯಮದವರಿಗೂ ದೇಶದ ಚುನಾವಣಾ ವ್ಯವಸ್ಥೆಯಲ್ಲಿನ 'ಫಿಕ್ಸಿಂಗ್' ತಂತ್ರಗಳ ಕುರಿತು ಸರಿಯಾಗಿ ಪ್ರಶ್ನಿಸುತ್ತಿದ್ದಾರೆ. ಅವರ 'ಪ್ರಜಾಲೋಚನೆ'ಯಲ್ಲಿ ಮತದಾರರಿಂದಲೇ ದೇಶಹಾಳು ಎಂಬುದನ್ನು ಸ್ಪಷ್ಟಪಡಿಸುತ್ತಿದ್ದಾರೆ. ರಾಜಕೀಯಕ್ಕಿಂತ ಮೊದಲು ಮತದಾರನನ್ನು ಸರಿಪಡಿಸಬೇಕು, ಆಮಿಷಗಳಿಗೆ ಕ್ಷಣಿಕ ಸುಖಗಳಿಗೆ ಬಲಿಯಾಗದೆ 'ಕಾಮನ್ ಮ್ಯಾನ್'ಗೆ ಮತನೀಡಿ ನೀವು 'ಚೀಫ್ ಮಿನಿಸ್ಟರ್' ಆಗಿ ಎಂದು ಕರೆನೀಡುತ್ತಿರುವ ಉಪೇಂದ್ರ, ಅವರ ಸದ್ವಿಚಾರಕ್ಕೆ ತದ್ವಿರುದ್ಧವಾಗಿ ಇಂದು ಕಾಂಗ್ರೆಸ್ ನೀಡುತ್ತಿರುವ 'ಗ್ಯಾರಂಟಿ'ಗಳು ಅಷ್ಟುಇಷ್ಟು ಉಳಿದುಕೊಂಡಿರುವ ಪ್ರಜಾಪ್ರಭುತ್ವದ ಪುಟಗೋಸಿಯನ್ನೇ ಕಿತ್ತೆಸೆಯುವಂತಿದೆ. ನೆರೆಯ ಶ್ರೀಲಂಕಾ, ಪಾಕಿಸ್ತಾನ ದೇಶಗಳು ತಿರುಪೆ ಎತ್ತುವಂತಾಗಿದ್ದರೂ ಈ ಕಾಂಗ್ರೆಸ್ ಮಾತ್ರ ರಾಜ್ಯದ ಮತದಾರರನ್ನು ಬ್ರಿಟಿಷರ ಕಾಲದ ಗತಿಗೆಟ್ಟ ದರಿದ್ರ ಗುಲಾಮಗಿರಿಯ ಪ್ರಜೆಗಳನ್ನಾಗಿ ಭಾವಿಸಿದಂತಿದೆ.

ದುಡಿಮೆ ಮಾಡಿ ಹತ್ತು ಕೆಜಿ ಅಕ್ಕಿ ಖರೀದಿಸಿ ತಿನ್ನುವಂಥ ಶಕ್ತಿ ನಮ್ಮ ಪ್ರಜೆಗಳಿಗೆ ಇಲ್ಲವೇ? ಹಾಗೊಮ್ಮೆ ಹತ್ತು ಕೆಜಿ ಅಕ್ಕಿ ಖರೀದಿಸಲೂ ಅಶಕ್ತನಾದ ಪ್ರಜೆಗಳಿದ್ದರೆ ಅದಕ್ಕೆ ನೇರಕಾರಣ ಅದೇ ಕಾಂಗ್ರೆಸ್ ಪಕ್ಷ. ಕಳೆದ ಅರವತ್ತಕ್ಕೂ ಹೆಚ್ಚು ವರ್ಷಗಳು ದೇಶವನ್ನಾಳಿದರೂ ಇಂದಿಗೂ ಪ್ರಜೆಗಳಿಗೆ 10 ಕೆಜಿ ಅಕ್ಕಿ ಉಚಿತವಾಗಿ ನೀಡುತ್ತೇವೆ ಎಂದು ಸಿದ್ದರಾಮಯ್ಯಅಂಗೈನ ಹತ್ತು ಬೆರಳುಗಳಲ್ಲಿ ತೋರಿಸಿ 'ಬೇಕೋ ಬೇಡವೋ' ಎಂದ ರೀತಿಯನ್ನು ನೋಡಿದರೆ ಕನ್ನಡಿಗರು ಸ್ವಾಭಿಮಾನಗೇಡಿಗಳೋ ಅಥವಾ ಉಗಾಂಡದಂಥ ದೇಶಗಕ್ಕಿಂತಲೂ ದಾರಿದ್ರ್ಯಕ್ಕೆ ಒಳಗಾಗಿದ್ದಾರೋ ಎಂಬ ಅನುಮಾನ ಹುಟ್ಟಿಸುತ್ತದೆ. ಒಂದು ಕಡೆ ಮೋದಿಯವರು ಹವಾಯಿ ಚಪ್ಪಲಿ ಧರಿಸುವವನೂ ವಿಮಾನದಲ್ಲಿ ಪ್ರಯಾಣಿಸುವಂತೆ ಮಾಡುತ್ತೇವೆ ಎನ್ನುತ್ತಿದ್ದರೆ ಕ್ಷೇತ್ರವೇ ಇನ್ನೂ ನಿಗದಿಯಾಗದ ಸಿದ್ದರಾಮಯ್ಯನವರು, 'ಹತ್ತು ಕೆಜಿ, ಹತ್ತು ಕೆಜಿ, ಹತ್ತು ಕೆಜಿ ಅಕ್ಕಿ ಬೇಕೋ ಬೇಡವೋ' ಎಂದು ಕೇಳುತ್ತಿದ್ದಾರೆ. ಇದನ್ನು ನೋಡಿದರೆ ಉಪೇಂದ್ರರ 'ಸೂಪರ್' ಸಿನಿಮಾದಲ್ಲಿ ಪ್ರಜೆಗಳ ಕಪಾಳಕ್ಕೆ ಹೊಡೆದು ಜಾಡಿಸಿ ಒದೆಯುವ ದೃಶ್ಯ ಕಣ್ಮುಂದೆ ಬರುತ್ತದೆ.

ಸುದ್ದಿವಾಹಿನಿಗಳು ರಾಜ್ಯದ ಇಂಧನ ಇಲಾಖೆಯ ಅಧಿಕಾರಿಗಳನ್ನು, ತಜ್ಞರನ್ನು ಕೂರಿಸಿಕೊಂಡು 200 ಯೂನಿಟ್ ಉಚಿತವಾಗಿ ಹೇಗೆ ಕೊಡಬಹುದು ಮತ್ತು ಅದರಿಂದ ರಾಜ್ಯದ ಬೊಕ್ಕಸಕ್ಕೆ ಸಾಲದ ಹೊರೆಯಾಗದಂತೆ ಹೇಗೆ ನಿಭಾಯಿಸಬಹುದೆಂದು ಲೈವ್ ಸಂದರ್ಶನ ಮಾಡಿನೋಡಲಿ. ಆಗ ಇಂಥ ಗ್ಯಾರಂಟಿಗಳ ವಾರೆಂಟಿಗಳ ಅಸಲಿಯತ್ತು ಬಯಲಾಗುತ್ತದೆ. ಬೇಕಿದ್ದರೆ ಈಗಲೂ ಬೆಸ್ಕಾಂ ಅಧಿಕಾರಿಗಳನ್ನು ಕೇಳಿ ನೋಡಿ, ಅವರ ಕಚೇರಿಯಲ್ಲಿ ವಿದ್ಯುತ್ ದರವನ್ನು ಏರಿಸಲೇಬೇಕಾದ ಅನಿವಾರ್ಯಕ್ಕೆ ಸಂಬಧಿಸಿದ ಕಡತಗಳು ಅನುಮೋದನೆಗಾಗಿ ಕೂತಿರುತ್ತವೆ. ಆದರೆ ನಾಗರಿಕರಿಗೆ ಹೊರೆಯಾಗದಿರಲೆಂದು ಅಂಥ ಫೈಲ್‌ಗಳನ್ನು ತಡೆಹಿಡಿದು ಸೂಕ್ತ ಸಮಯದಲ್ಲಿ ಬೆಲೆ ಏರಿಕೆ ಮಾಡುತ್ತದೆ. ವಾಸ್ತವಾಂಶ ಹೀಗಿರುವಾಗ ಕಾಂಗ್ರೆಸ್ ಮಾತ್ರ 200 ಯೂನಿಟ್‌ಗಳ ಉಚಿತ ಗ್ಯಾರಂಟಿಯನ್ನು ನೀಡುತ್ತೇವೆ ಎಂದು ಘೋಷಿಸುತ್ತದೆ. ಅದಕ್ಕೆ ಸಂಬಂಧಿಸಿದ ಅಂಕಿ ಅಂಶಗಳನ್ನು ಸಮತೋಲನ ತಂತ್ರಗಳನ್ನು ಪ್ರಜೆಗಳಿಗೆ ವಿವರಿಸಬೇಕಿದೆ.

ಇನ್ನು ಮನೆಯ ಒಡತಿಗೆ ತಿಂಗಳಿಗೆ 2000ರು. ಗ್ಯಾರಂಟಿ. ನಮ್ಮ ಮಹಿಳೆಯರು ಮೊದಲೆಲ್ಲ ಅಗರಬತ್ತಿ ಉಜ್ಜಿ, ಬೀಡಿಗಳನ್ನು ಸುತ್ತಿ, ಸೀರೆ ರವಿಕೆ ಉಡುಗೆಗಳ ಕುಸುರಿಕೆಲಸಗಳಲ್ಲದೇ ಅನೇಕ ಗುಡಿಕೈಗಾರಿಕೆಗಳ ಮೂಲಕ ಗಂಡನೊಂದಿಗೆ ಒಂದಷ್ಟು ಹಣ ಸಂಪಾದಿಸಿ, ಮಕ್ಕಳನ್ನು ಓದಿಸಿ ಸ್ವಾಭಿಮಾನದಿಂದ ಬದುಕುತ್ತಿದ್ದರು. ಕಾಲ ಬದಲಾದಂತೆ ತಂತ್ರಜ್ಞಾನಗಳ ಪರಿಚಯವಾಗಿ ಗುಡಿಕೈಗಾರಿಕೆಗಳನ್ನೆಲ್ಲ ಯಂತ್ರಗಳು ನುಂಗಿ ಹಾಕಿವೆ. ಅಂಥ ವಸ್ತುಗಳು ಹೆಚ್ಚಾಗಿ ವಿದೇಶಗಳಿಂದ ಆಮದುಗಳಾಗುತ್ತಿರುವುದರಿಂದ ಗುಡಿಕೈಗಾರಿಕೆ ಎಂಬ ಕಲ್ಪನೆಯೇ ನಶಿಸಿದೆ. ಇಂಥ ಪರಿಸ್ಥಿತಿಯಲ್ಲಿ ಪ್ರಜ್ಞಾವಂತ ರಾಜಕೀಯ ನಾಯಕರು ಹೆಣ್ಣುಮಕ್ಕಳ ಮನೆಯ ಸಮಯವನ್ನು ಉಪಯೋಗಿಸಿಕೊಳ್ಳುವಂಥ ಸಣ್ಣಪುಟ್ಟ ಕೈಕೆಲಸಗಳನ್ನು ಮಾಡಿಸಿಕೊಂಡು ಅದಕ್ಕೆ ತಕ್ಕಂಥ ಮಜೂರಿಯನ್ನು ಕೊಟ್ಟರೆ ಹೆಣ್ಣುಮಕ್ಕಳು ಸ್ವಾವಲಂಬಿಯಾಗುತ್ತಾರಲ್ಲವೇ? ಹಳ್ಳಿ ನಗರಳಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳು ಬೆಳೆಯುತ್ತಲೇ ಇವೆ. ಅವುಗಳಿಗೆ ಸಾಲಗಳನ್ನೂ ನೀಡುತ್ತಿದ್ದಾರೆ. ಅಂಥ ಸಂಘಗಳಿಂದ ಸಣ್ಣಪುಟ್ಟ ಕೈಗಾರಿಕೆಗಳನ್ನು ನಡೆಸಿ ಅವರನ್ನು ಲಘು ಉದ್ಯಮಿಗಳನ್ನಾಗಿ ಮಾಡಬಹುದಲ್ಲವೇ? ಎಲ್ಲವನ್ನೂ ಗುತ್ತಿಗೆದಾರರಿಗೇ ಕೊಟ್ಟರೆ ಸಾವಿರ ಮಂದಿ ತಿನ್ನುವುದನ್ನು ಅವನೊಬ್ಬನೇ ತಿನ್ನುವಂತೆ ಮಾಡಿ ಅವನ ಎಂಜಲನ್ನು ತಿನ್ನುವ ಮಾಡಡಾಳ್‌ನಂಥ ಗಿರಾಕಿ ಕೊಬ್ಬುತ್ತಾರಷ್ಟೆ ! ಮೊದಲು ಮನೆ ಒಡೆಯನ ವೇತನ ಹೆಚ್ಚಿಸುವ ಯೋಜನೆ ಜಾರಿಯಾಬೇಕಿದೆ. ಕನಿಷ್ಠವೇತನ ಕಡ್ಡಾಯವಾದರೆ ಹತ್ತು ಕೆಜಿಯಲ್ಲ ತಿಂಗಳಿಗೆ 1200 ರು. ಬೆಲೆಯ 25 ಕೆಜಿ ಅಕ್ಕಿಯನ್ನು ಖರೀದಿಸುವಂತೆ ವ್ಯವಸ್ಥೆಯನ್ನೇ ಸುಧಾರಿಸಬಹುದಲ್ಲವೇ? ಬೆಲೆ ಏರಿಕೆ ಆರ್ಥಿಕ ವ್ಯವಸ್ಥೆಯ ಅನಿವಾರ್ಯವಾದರೆ ಬಡವರ ಕೂಲಿಯ ವೇತನವೂ ಏರಿಕೆಯಾಗಬೇಕಲ್ಲವೇ? ಆದರೆ ಇದಾಗದೇ ಶ್ರೀಮಂತರ ದಿಕ್ಕು, ಭವಿಷ್ಯ ರೂಪಿಸುತ್ತಿದ್ದರೆ ಶ್ರಮಿಕರ ದಿಕ್ಕು ಮಾತ್ರ ಇತಿಹಾಸ ಸೇರುತ್ತಿದೆ. ಇಂಥ ಬಡವರ ದುಃಸ್ಥಿತಿಯನ್ನೇ ಅಸ್ತ್ರಮಾಡಿಕೊಂಡ ಪಿತೃಪಕ್ಷಗಳು ಅವರ ಮತಗಳನ್ನು ಕಬಳಿಸುವುದಕ್ಕಾಗಿ ದಿಢೀರ್ ಸ್ಖಲನದಂಥ ಮನೆಹಾಳು ಗ್ಯಾರಂಟಿಗಳನ್ನು ಘೋಷಿಸಲಾರಂಭಿಸಿರುವುದು ಪ್ರಜಾಪ್ರಭುತ್ವದ ದುರಂತ.

ಒಂದೆಡೆ ಕೇಂದ್ರ ಸರಕಾರ 'ಅಗ್ನಿಪಥ್' ಯೋಜನೆಯಡಿ ಯುವಶಕ್ತಿ ಬೇಜವಾಬ್ದಾರಿಗಳಾಗದಂತೆ ತಡೆದು, ಸ್ವಾಭಿಮಾನಿ ದೇಶಪ್ರೇಮಿಗಳನ್ನು ರೂಪಿಸಲು ನಿರ್ಧರಿಸಿದೆ. ಹದಿನೇಳೂವರೆ ವಯಸ್ಸಿಗೇ ದುಡಿಮೆ ಆರಂಭಿಸಿ ಸಾರ್ಥಕ ಯುವಕರನ್ನಾಗಿಸುವ ಅಗ್ನಿವೀರ ಸೇವೆಯನ್ನು ಸೃಷ್ಟಿಸಿ ದೇಶವನ್ನು, ದೇಶದ ಭವಿಷ್ಯವನ್ನು ಭದ್ರಗೊಳಿಸಲು ಶ್ರಮಿಸುತ್ತಿದೆ. ಆರದೆ ಕಾಂಗ್ರೆಸ್ ಅದರ ಬದಲಿಗೆ ಅಂಥ ಯುವಕರಿಗೆ 1500 ರಿಂದ 3000 ರೂಪಾಯಿಗಳ ಗ್ಯಾರಂಟಿ ಘೋಷಿಸುತ್ತಿರುವುದನ್ನು ಗಂಭೀರವಾಗಿ ಅವಲೋಕಿಸಿದರೆ ಯುವ ಸಮೂಹಕ್ಕೇ ಅಪಾಯಕಾರಿ. ನಮ್ಮಲ್ಲಿ ದುಡಿಮೆಯಲ್ಲೇ ದೇವರೆಂದು ಬದುಕುವ ಪರಂಪರೆ ಇದೆಯೇ ಹೊರತು, ಬೆಳೆದ ಮಗನಿಗೆ ಪಾಕೆಟ್ ಮನಿ ಕೊಟ್ಟು ಓತ್ಲಾ ಹೊಡೆದುಕೊಂಡಿರು ಎನ್ನುವಂಥ ತಂದೆತಾಯಿಗಳು ಇರುವುದಿಲ್ಲ. ಅಂಥ ಮಕ್ಕಳಾಗುವುದಕ್ಕೆ ಯುವಕರೇನು ಆಲೂಗಡ್ಡೆ ತಜ್ಞರಲ್ಲ? ದುಡಿಯುವ ವಯಸ್ಸಿನ ಮಗನಿಗೆ ದುಡಿಯಲು ಹೇಳದೆ ಖರ್ಚಿಗೆ ತಿಂಗಳಿಗಿಷ್ಟು ಹಣ ನೀಡಿದರೆ ಆತನೇನು ಧರ್ಮಸ್ಥಳ, ತಿರುಪತಿಗೆ ಹೋಗಿಬರುತ್ತಾನೆಯೇ? ಅಥವಾ ಮನೆಗೆ ಊದಿನಬತ್ತಿ, ಕರ್ಪೂರ ತರಲು ಉಪಯೋಗಿಸುತ್ತಾನೆಯೇ? ಟ್ರೀಟು, ಡೇಟಿಂಗು, ಪಾರ್ಟಿ, ಗ್ಯಾದರಿಂಗಿನಂಥ ಶೋಕಿಗಳಲ್ಲದೇ, ರಮ್ಮಿ ಎ2 ಡ್ರೀಂ ಲೆವೆನ್‌ನಂಥ ಆನ್‌ಲೈನ್ ಗೇಮುಗಳ ಕಾಲದಲ್ಲಿ ಮಕ್ಕಳಿಗೆ ಪುಗಸಟ್ಟೆ ಹಣ ನೀಡಿದರೆ ಇಲ್ಲದ ಚಟಕ್ಕೆ ಸಲ್ಲದ ಗುಲಾಮಗಿರಿಗೆ ಒಳಗಾಗುತ್ತಾನೆಯೇ ಹೊರತು ಸ್ವಾಭಿಮಾನದ ಮನಃಸ್ಥಿತಿಯನ್ನು ಹೊಂದುವುದಿಲ್ಲ. ಈ ವಿಚಾರದಲ್ಲಿ ನಮ್ಮ ರಾಹುಲ್‌ಗಾಂಧಿಯೇ ಪರವಾಗಿಲ್ಲ, ಹುಟ್ಟು ಶ್ರೀಮಂತನಾಗಿದ್ದು ಅವಿವಾಹಿತನಾಗಿದ್ದರೂ ಯಾವುದೇ ಚಟಗಳಿಗೆ ಒಳಗಾಗದೆ ಆಗಾಗ ಕಣ್ಮರೆಯಾಗಿ ವಿದೇಶಗಳನ್ನು ಸುತ್ತಿ ಅಲ್ಲಿ ಭಾರತದ ಮಾನ ಹರಾಜ್ಹಾಕಿ ಬರುತ್ತಾರೆ. ಆದರೆ, ಕೆಲ ನಾಯಕರ ಮಕ್ಕಳು ಇಪ್ಪತ್ತು ವಯಸ್ಸಿಗೇ ನೂರು ಕೋಟಿ ಸಂಪಾದಿಸುವವರು, ಬಾರ್, ಪಬ್-ಕ್ಲಬ್ ರೆಸಾರ್ಟುಗಳನ್ನು ನಡೆಸುವ 'ಉದ್ಯಮಿ'ಗಳಾಗಿದ್ದಾರೆ. ಆದರೆ ಬಡವ-ಮದ್ಯಮವರ್ಗದ ಮಕ್ಕಳು ಮಾತ್ರ ಮೂರು ಸಾವಿರದಂಥ 'ಯುವಪಿಂಚಣಿ' ಪಡೆದು ದುಡಿಮೆಗೆ 'ಕೈ' ಎತ್ತಬೇಕೇ?

ಉಪೇಂದ್ರ ಅವರು ಜನಗಳಿಗೆ ಒಂದೊಳ್ಳೆಯ ಸಲಹೆ ನೀಡಿದ್ದಾರೆ. ಅದೇನೆಂದರೆ ಈ ರಾಜಕೀಯ ಪಕ್ಷಗಳು ನೀಡುವ ಗ್ಯಾರಂಟಿ ಅಥವಾ ಪ್ರಣಾಳಿಕೆಯ ಭರವಸೆಗಳನ್ನು ನ್ಯಾಯಾಲಯದಲ್ಲಿ ನೋಂದಣಿ ಮಾಡಿಸಬೇಕು. ನಂತರ ಆ ಪಕ್ಷ ಗೆದ್ದು ಬಂದರೆ ಅದನ್ನು ಮೊದಲ ವರ್ಷದಲ್ಲೇ ಜಾರಿಗೆ ತರುವ ಪ್ರಯತ್ನವಾಗಬೇಕು. ಅದಾಗದಿದ್ದರೆ ಕೂಡಲೇ ರಾಜಿನಾಮೆ ನೀಡಿ ಸರಕಾರದಿಂದ ಹೊರಬರಬೇಕು. ಮೊದಲು ಇಂಥ ನಿಯಮವನ್ನು ಜಾರಿಗೆ ತರಲಿ ನೋಡಿ. ಆಗ ಇಂಥ ಗ್ಯಾರಂಟಿಗಳನ್ನು ನೀಡುವ ಅಯೋಗ್ಯರೆಲ್ಲ ಐಡೆಂಟಿಟಿ ಇಲ್ಲದಂತೆ ಹೋಗುತ್ತಾರೆ. ನಮ್ಮ ದೇಶದ ನಾಗರಿಕರು ಬೆಲೆ ಏರಿಕೆ ಕಡಿಮೆ ಮಾಡಿ, ಉಚಿತ ಆರೋಗ್ಯ-ಶಿಕ್ಷಣ ನೀಡಿ, ಉದ್ಯೋಗ ಸಿಗುವಂತೆ ಮಾಡಿ ಎಂದು ಬೇಡುತ್ತಾರೆಯೇ ಹೊರತು ಹಣವನ್ನು ಪುಗಸಟ್ಟೆ ಕೊಡಿ, ಅಕ್ಕಿ ಕೊಡಿ, ಕರೆಂಟು ಫ್ರೀಯಾಗಿ ಕೊಡಿ ಎಂದು ಭಿಕ್ಷೆ ಬೇಡುವ ನಿರ್ಲಜ್ಜರಲ್ಲ.

ಮೊನ್ನೆ ಬೆಳಗಾವಿಗೆ ಬಂದ ರಾಹುಲ್‌ಗಾಂಧಿ 2000 ಯೂನಿಟ್ ಉಚಿತವಾಗಿ ನೀಡುತ್ತೇವೆ ಎಂದು ಬಾಯಿತಪ್ಪಿ ಹೇಳಿದರು. ಅದನ್ನೇ ಸೋಷಿಯಲ್ ಮೀಡಿಯಾದಲ್ಲಿ 2000 ಯೂನಿಟ್ ಕೊಡುವುದಕ್ಕೆ ಪ್ರತಿಯೊಬ್ಬರ ಮನೆಯಲ್ಲೇನು ರಾಗಿ ಮಿಷನ್ನು, ಪಂಪ್‌ಸೆಟ್ ಇಟ್ಟುಕೊಂಡಿದ್ದಾರೆಯೇ ಎಂದು ಜಾಡಿಸಿದ್ದಾರೆ. ಅಷ್ಟರ ಮಟ್ಟಿಗೆ ಯುವಕರು ಎಚ್ಚೆತ್ತುಕೊಂಡಿದ್ದಾರೆ. ಮೊದಲೆಲ್ಲಾ ಕ್ವಾರ್ಟರ್ ಎಣ್ಣೆಗೆ, ಹೊಟ್ಟೆಪಾಡಿಗೆ ಪಿಕ್‌ಪಾಕೆಟ್, ಕಳ್ಳತನ, ದರೋಡೆ, ಕೊಲೆಗಳಾಗುತ್ತಿದ್ದವು. ಆಗ ಇಂಥ ಉಚಿತ ಗ್ಯಾರಂಟಿಗಳು ಲಭಿಸಿದ್ದರೆ ಒಂದಷ್ಟು ಅಪರಾಧ ಪ್ರಮಾಣಗಳು ಕಡಿಮೆಯಾಗುತಿತ್ತೇನೋ? ಆದರೆ ಈಗಿನ ಯುವಕರಿಗೆ ಆಪಲ್‌ಫೋನು, ಶೋಕಿಗೆ ಕೆಟಿಎಂ ಬೈಕು, ದುಬಾರಿ ಡಿಯೋಡ್ರೆಂಟು, ರೆಬೆನ್ ಕೂಲಿಂಗ್‌ಗ್ಲಾಸು, ಇಂಪೋರ್ಟೆಡ್ ಜಾಕೆಟ್‌ಗಳು ಬೇಕು. ಇದಕ್ಕಾಗಿ ಆತನಿಗೆ ಸರಿಯಾದ ಉದ್ಯೋಗ ಬೇಕು. ಲಕ್ಷಾಂತರ ಸುರಿದು ಪದವಿಧರನನ್ನಾಗಿಸಿದ ಅಪ್ಪಅಮ್ಮನಿಗೆ ಮಗನ ಶೋಕಿಗೆ ಮೂರುಸಾವಿರ ಕೊಡಲು ಸಾಧ್ಯವಿಲ್ಲವೇ? ಆದರೆ ಯುವ ಸಮೂಹಕ್ಕೆ ಮೊದಲು ಬೇಕಿರುವುದು ಸಮಾಜ-ದೇಶದೆಡೆಗಿನ ಪ್ರಜ್ಞೆ, ಡಾ.ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ಕಟ್ಟಿಕೊಟ್ಟ ಸಂವಿಧಾನದ, ಪ್ರಜಾಪ್ರಭುತ್ವದ ಅರಿವು ಸ್ವಾಭಿಮಾನ ದೇಶಾಭಿಮಾನದ ಮನಃಸ್ಥಿತಿಯ ಗ್ಯಾರಂಟಿ. ಇದು ಗ್ಯಾರಂಟಿ ಇದ್ದರೆ ಹೇಗಾದರು ದುಡಿದು ತಿನ್ನುವುದು ಗ್ಯಾರಂಟಿ. ಪುಗಸಟ್ಟೆ ಯೋಜನೆಗಳಿಂದ ದೇಶ ಆರ್ಥಿಕವಾಗಿ, ನೈತಿಕವಾಗಿ, ಬೌದ್ಧಿಕವಾಗಿ ದಿವಾಳಿಯಾಗಿ ಸರ್ವನಾಶವಾಗುವುದು ಮಾತ್ರ ಪಕ್ಕಾ 'ಗ್ಯಾರಂಟಿ'!!

ಇಂದಿನ ಐಎಎಸ್ ಪರೀಕ್ಷೆಯಂಥ ಐಸಿಎಸ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಐಷರಾಮಿ ಉದ್ಯೋಗವನ್ನು ಎಡಗಾಲಿನಲ್ಲಿ ಒದ್ದು, 'ನಮ್ಮನ್ನು ಆಳುತ್ತಿರುವ ಬ್ರಿಟಿಷರ ದೇಶದಲ್ಲಿ ನಿಂತು ಅವರ ಕೈಗಳಿಂದ ನನ್ನ ಬೂಟಿಗೆ ಪಾಲಿಷ್ ಮಾಡಿಸಿಕೊಳ್ಳುತ್ತಿದ್ದೇನೆ. ಇದು ನನ್ನ ಮೊದಲ ಗೆಲುವು, ಮುಂದೆ ನೋಡಿ...' ಎಂದು ತನ್ನ ತಂದೆ ತಾಯಿಗೆ ಇಂಗ್ಲೆಂಡಿನಿಂದ ಪತ್ರ ಬರೆದ ಯುವ ಲಾವಾರಸ ನೇತಾಜಿ ಸುಭಾಷ್ ಚಂದ್ರ ಬೋಸ್. ದೇಶಕ್ಕೆ ಬೇಕಿರುವುದು ಇಂಥ ಗ್ಯಾರಂಟಿ ದೇಶಭಕ್ತ ಯುವಕರು. ನೋಡೋಣ ಮುಂದಿನ ಚುನಾವಣೆಯಲ್ಲಿ!

ಪ್ರಸ್ತುತ

ಸಾಗರ್ ಕುಲಕರ್ಣಿ

ಇಡೀ ದೇಶಕ್ಕೆ ಸ್ವಾತಂತ್ರ ಸಿಕ್ಕಿದ್ದರೂ, ಇಲ್ಲಿನ್ನೂ ಪರಕೀಯ ಆಡಳಿತವಿತ್ತು!

ಹೊಟ್ಟೆಗ್ಯಾಗೊದೊ ಬೆಂಕಿ ಬುಕತಾನೋ ಮಣ್ಣು ಫಕ್ಕಿ ಒಡಕೊಂಡ್ಯಾನೂ ಕೈ ಕಾಲೂ ತಿಕ್ಕಿ ಕೋಲಣ್ಣಾ ಕೋಲೆ!

ಮೇಲಿನ ಸಾಲುಗಳು ಈ ಭಾಗದಲ್ಲಿ ಜನಪ್ರಿಯವಾಗಿರುವ ಒಂದು ಜಾನಪದ ರೂಪವಾದ ಭೂಲ್ಯೆ ಪದಕ್ಕೆ ಸೇರಿವೆ. ಈ ಸಾಲುಗಳು ಹೆಚ್ಚು ಜನಪ್ರಿಯವಾಗಿಲ್ಲ. ಏಕೆಂದರೆ, ಅವರು ಹೈದರಾಬಾದ್ ಕರ್ನಾಟಕ ಪ್ರದೇಶವು ಹೈದರಾಬಾದ್ ನಿಜಾಮರಿಂದ ವಿಮೋಚನೆಗೊಳ್ಳುವ ಹಿಂದಿನ ಅವಧಿಯ ಬಗ್ಗೆ ಮಾತನಾಡುತ್ತಾರೆ. ಪ್ರಸ್ತುತ ಬೀದರ ಜಿಲ್ಲೆಯ ಹೂಲಸೂರು ತಾಲ್ಲೂಕಿನ ಗೋರ್ಟಾ ಗ್ರಾಮದ ಮಹಿಳೆಯರು ಆ ಹೋರಾಟದಲ್ಲಿ ಬದುಕುಳಿದವರು ಈ ಪ್ರದೇಶದ ವಿಮೋಚನೆಗೆ ಕಾರಣವಾದ ಘಟನೆಗಳನ್ನು ನೆನಪಿಸಿಕೊಳ್ಳುವಾಗ ಈ ಸಾಲುಗಳನ್ನು ಹಾಡುತ್ತಾ ಕಣ್ಣೀರು ಹಾಕುತ್ತಾರೆ.

ಭಾರತವು ಆಗಸ್ಟ್ 15, 1947 ರಂದು ಸ್ವಾತಂತ್ರ್ಯವನ್ನು ಗಳಿಸಿತು, ಆದರೆ ಹೈದರಾಬಾದ್ ನಿಜಾಮ್ ಭಾರತೀಯ ಒಕ್ಕೂಟಕ್ಕೆ ಸೇರಲು ನಿರಾಕರಿಸಿದರು. ಮತ್ತು ಇಂದಿನ ಬೀದರ್, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳು ಮತ್ತು ಇತರೆ ಸ್ಥಳಗಳನ್ನು ಒಳಗೊಂಡಿರುವ ಪ್ರದೇಶವು ಸ್ವಾತಂತ್ರ್ಯದಿಂದ ವಂಚಿತವಾಗಿತ್ತು, ಆದರೂ ಸಹ ಆ ಭಾಗದ ಜನರು ಭಾರತದ ಒಕ್ಕೂಟಕ್ಕೆ ಸೇರಲು ಹೆಚ್ಚಿನ ಒಲವನ್ನು ತೋರಿದರು. ಇದು ಅಧಿಕಾರದಲ್ಲಿರುವ ವಿರುದ್ಧ ಹೋರಾಟದ ಬೀಜಗಳನ್ನು ಬಿತ್ತಿದ್ದು, ತ್ರಿವರ್ಣ ಧ್ವಜ ಮತ್ತು ವಂದೇ ಮಾತರಂ ಘೋಷಣೆಗಳು ಹೋರಾಟದ ಸಂಕೇತಗಳಾಗಿದ್ದವು. ಇವುವೆಲ್ಲವೂ ಆಡಳಿತಗಾರರ ಆಕ್ರೋಶಕ್ಕೆ ಗುರಿಯಾದವು, ದಿನಗಳು ಕಳೆದಂತೆ ಚಲಾವಣೆ ಪಡೆಯಲಾರಂಭಿಸಿದ ಚಳುವಳಿಯನ್ನು ನಿಜಾಮ ಪೋಲಿಸರು ನಿರ್ದಯವಾಗಿ ಹತ್ತಿಕ್ಕಲು ಆರಂಭಿಸಿದರು, ಈ ಸಮಯದಲ್ಲಿ ಗೋರ್ಟಾ ಆಕಾಶದಲ್ಲಿ ತ್ರಿವರ್ಣ ಗಾಳಿಪಟಗಳನ್ನು ಹಾರಿಸಲಾಯಿತು. ನಿಜಾಮ್ ಪೋಲಿಸರ ಗಮನ ಸೆಳೆಯುವುದು ಸ್ವಾಭಾವಿಕವಾಗಿತ್ತು ಮತ್ತು ನಂತರದ ಘಟನೆಗಳು ಹತ್ಯಾಕಾಂಡಕ್ಕೆ ಕಾರಣವಾಯಿತು. ನಂತರ ಮೇ 9 ಮತ್ತು 10, 1948 ರಂದು ಹಲವಾರು ಜನರು ರಜಾಕಾರರೊಂದಿಗೆ ಹೋರಾಡಿ ತಮ್ಮ ಪ್ರಾಣವನ್ನು ಅರ್ಪಿಸಿದರು.

ಈ ಘೋರ ಘಟನೆಯಲ್ಲಿ ಗ್ರಾಮದ ಹಿರಿಯರಾದ ರಾಚಯ್ಯ ಮಠಪತಿ, ಬಸಪ್ಪ ಪೋಲಿಸ್‌ಗೌಡ, ಅನಿರುದ್ರಪ್ಪ ಪೋಲಿಸ್‌ಗೌಡ, ರಾಮರಾವ್ ಕುಲಕರ್ಣಿ, ನಾರಾಯಣ ಮಕ್ತೇದಾರ, ಚನ್ನಪ್ಪ ಬಿರಾದರ್ ಮತ್ತು ಇತರರನ್ನು ದಾರುಣವಾಗಿ ಹತ್ಯೆಗಯ್ಯಲಾಯಿತು. ಮತ್ತು ಇಡೀ ಗ್ರಾಮಕ್ಕೆ ಬೆಂಕಿಯನ್ನು ಹಚ್ಚಿದರು. ಗೋರ್ಟಾ ಗ್ರಾಮದ ಲಕ್ಷ್ಮೀ ದೇವಸ್ಥಾನದ ಮುಂದೆ ನಡೆದ ಹತ್ಯಾಕಾಂಡವನ್ನು ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದು ಕರೆಯಲಾಗುತ್ತದೆ. ಭಾರತದ ಒಕ್ಕೂಟಕ್ಕೆ ಸೇರುವುದನ್ನು ಒಪ್ಪದ ನಿಜಾಮನನ್ನು ಸಪ್ಟೆಂಬರ್ 13 ರಿಂದ 16, 1948 ರವರೆಗೆ ನಿಜಾಮನ ರಾಜ್ಯವನ್ನು ನಾಲ್ಕು ದಿಕ್ಕುಗಳಿಂದ ಭಾರತೀಯ ಸೈನ್ಯವನ್ನು ಕಳುಹಿಸಿ ಭಾರತದ ಒಕ್ಕೂಟಕ್ಕೆ ಸೇರ್ಪಡೆಗೊಳ್ಳುವಂತೆ ಅಂದಿನ ಗೃಹ ಮಂತ್ರಿಗಳಾದ ಶ್ರೀ ಸರ್ದಾರ್ ವಲ್ಲಭ್ಭಾಯಿ ಪಟೇಲ್ ಅವರು ಮಾಡಿದರು.

ದೇಶಕ್ಕೆ 15 ಅಗಸ್ಟ್ 1947 ರಂದು ಬ್ರಿಟಿಷರಿಂದ ಸ್ವಾತಂತ್ರ್ಯ ಸಿಕ್ಕಿದ್ದಕ್ಕಾಗಿ ದೇಶದಲ್ಲಿ ಪ್ರತಿ ವರ್ಷ ಆಚರಿಸುವ ಸ್ವಾತಂತ್ರ್ಯ ದಿನಾಚಾರಣೆಯ ಹಾಗೆಯೇ ಈ ಭಾಗದಲ್ಲಿ 17 ಸಪ್ಟೆಂಬರ್ 1948 ರಂದು ಹೈದ್ರಾಬಾದ್ ನಿಜಾಮರ ಆಡಳಿತದಲ್ಲಿ ಇದ್ದ ರಾಜ್ಯವು ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾಗಿದ್ದ ಹಿನ್ನಲೆಯಲ್ಲಿ ಪ್ರತಿ ವರ್ಷ 17 ಸಪ್ಟೆಂಬರ್ ಹೈದ್ರಾಬಾದ್ ಕರ್ನಾಟಕ ವಿಮೋಚನಾ ದಿನಾಚಾರಣೆಯನ್ನು ಸಹ ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಹೈದರಾಬಾದ್ ನಿಜಾಮರಿಂದ ಇಷ್ಟೊಂದು ದೌರ್ಜನ್ಯ, ಆಸ್ತಿ ಹಾನಿ, ಅತ್ಯಾಚಾರ ಹೀಗೆ ಅನೇಕ ಕಷ್ಟಗಳನ್ನು ಎದುರಿಸಿದ ಈ ಭಾಗದ ಜನರಿಗೆ ಸರಿಯಾದ ಗೌರವ ಇಲ್ಲಿಯವರೆಗೂ ಸಿಕ್ಕಿಲ್ಲ. ಕಾಕತಾಳೀಯ ಎಂಬಂತೆ ಈ ಭಾಗವು ಭಾರತದ ಒಕ್ಕೂಟಕ್ಕೆ ಸೇರಬೇಕೆಂಬ ಆಸೆ ಅಂದಿನ ಗೃಹ ಮಂತ್ರಿಗಳಾದ ಶ್ರೀ ಸರ್ದಾರ್ ವಲ್ಲಭ್ಭಾಯಿ ಪಟೇಲ್ ಅವರದ್ದಾಗಿತ್ತು, ಮತ್ತು ಅದನ್ನು ಅವರು ಸಾಧ್ಯ ಮಾಡಿದರು. ಈ ಗೋರಟಾ ಗ್ರಾಮವು ಮುನ್ನಲೆಗೆ ಬರಲು ಶ್ರಮಿಸಿದ ಗ್ರಾಮಸ್ಥರು ಮತ್ತು ಅನೇಕ ಮಹನೀಯರ ಫಲವಾಗಿ ಗ್ರಾಮದಲ್ಲಿ ನಿರ್ಮಿಸಲಾದ ಹುತಾತ್ಮರ ಸ್ಮಾರಕ ಮತ್ತು ಪಟೇಲರ ಪ್ರತಿಮೆಯನ್ನು ಭಾರತ ಸರಕಾರದ ಗೃಹ ಮಂತ್ರಿಗಳಾದ ಅಮಿತ್ ಶಾ ಅವರಿಂದ ಲೋಕಾರ್ಪಣೆಗೊಳ್ಳುತ್ತಿದೆ ಎಂಬುದು ಗ್ರಾಮಸ್ಥರಲ್ಲಿ ಹಬ್ಬದ ವಾತಾವರಣ ಮೂಡಿಸಿದೆ.

ಸಂಗೀತವೆಂಬ ಸುರಗಂಗೆಗೆ ಮಿತಿಗಳಿಲ್ಲ

● ವಿಜಯ ದರಡಾ

ನಮ್ಮ ಬದುಕಿನಲ್ಲಿ ಸಂಗೀತವೆಂಬ ಸುರಗಂಗೆ ಇಲ್ಲದೇ ಇದ್ದರೆ ಜೀವನ ಅದೆಷ್ಟು ನೀರಸವೆನಿಸುತ್ತದೆ, ಅಲ್ಲವೇ? ಸಂಗೀತದ ಗಂಧವೇ ಇಲ್ಲದ ಜನರು ಹೇಗಿರಬಹುದು, ಅವರ ಬದುಕು ಅದೆಷ್ಟು ದುರ್ಭರವಾಗಿರಬಹುದು, ಊಹಿಸಿ. ನಾನು ಅಫ್ಘಾನಿಸ್ತಾನದ ಬಗ್ಗೆ ಹೇಳುತ್ತಿದ್ದೇನೆ. ಏಕೆಂದರೆ ಅಲ್ಲಿ ತಾಲಿಬಾನಿ ಆಡಳಿತ ಸಂಗೀತವನ್ನು ಹೊರಗಟ್ಟಿದೆ. ಅಲ್ಲಿ ಯಾರೂ ಸಂಗೀತ ಆಲಿಸುವಂತಿಲ್ಲ, ಹಾಡುವಂತಿಲ್ಲ. ಅದು ಅಲ್ಲಿ ನಿಷಿದ್ಧ. ಅಫ್ಘಾನಿಸ್ತಾನದಲ್ಲಿ ರಾಷ್ಟ್ರೀಯ ಸಂಗೀತ ಸಂಸ್ಥೆಯನ್ನು ಧ್ವಂಸಗೊಳಿಸಲಾಗಿದೆ. ಆದರೂ ತಾಲೀಬಾನ್ ಹಿಡಿತದಿಂದ ಇವೆಲ್ಲವನ್ನೂ ತಪ್ಪಿಸುವುದಕ್ಕೆ ಅಲ್ಲಿ ಸಾಕಷ್ಟು ಯತ್ನಗಳು ನಡೆಯುತ್ತಲೇ ಇವೆ. ಸಂಗೀತ ಕಲಾವಿದರು ತಮ್ಮ ಕಲೆಯನ್ನು ಅಸ್ತ್ರವನ್ನಾಗಿ ಪರಿವರ್ತಿಸಿಕೊಂಡು ಸಮಯಕ್ಕಾಗಿ ಕಾಯುತ್ತಿದ್ದಾರೆ.

ತಾಲೀಬಾನಿಗಳಿಂದ ಕಲಾವಿದರನ್ನು ಬಚಾವು ಮಾಡುವಲ್ಲಿ ಶ್ರಮಿಸಿದ ವ್ಯಕ್ತಿ ಅಹಮದ್ ಸಮರಸ್ಟ್ ಎಂಬ ಧೈರ್ಯಸ್ಥ. ಆತ ದೇಶದಲ್ಲಿ ಸಂಗೀತವನ್ನು ಮತ್ತೆ ಅಸ್ತಿತ್ವಕ್ಕೆ ತರುವುದಕ್ಕೆ ಸಜ್ಜಾಗಿದ್ದಾನೆ. 2010ರಲ್ಲಿ ಆತ ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಮ್ಯೂಸಿಕ್ ಅನ್ನು ಸ್ಥಾಪನೆ ಮಾಡಿದ್ದ. ಅಫ್ಘಾನ್ ಮ್ಯೂಸಿಕ್ಕನ್ನು ವಿಶ್ವವ್ಯಾಪಿ ಮಾಡುವುದಕ್ಕೆ ಆತ ಪಣ ತೊಟ್ಟಿದ್ದ. ತಾಲಿಬಾನಿಗಳು ಮತ್ತೆ ಅಲ್ಲಿ ಅಧಿಕಾರಕ್ಕೆ ಬರುತ್ತಾರೆಂದು ಯಾರೂ ಊಹೆ ಕೂಡ ಮಾಡಿರಲಿಲ್ಲ. ಆದರೂ ಆತ 58 ವಿದ್ಯಾರ್ಥಿಗಳೊಂದಿಗೆ ಹೊರನಡೆದು ಪೋರ್ಚುಗಲ್‌ನಲ್ಲಿ ಹೊಸತೊಂದು ಅಧ್ಯಾಯವನ್ನು ಸೃಷ್ಟಿ ಮಾಡಿದ್ದಾನೆ. ಆತ ಯಾವುದೇ ಸಂಗೀತ ಶಾಲೆಯಲ್ಲಿ ಕಲಿತವನಲ್ಲ, ಆದರೂ ಸಂಗೀತದ ಬಗ್ಗೆ ಅದೇನೋ ಅಭಿಮಾನ ಅವನಲ್ಲಿದೆ. ಎಲ್ಲರಲ್ಲೂ ತಾಲೀಬಾನಿಗಳ ವಿರುದ್ಧ ಒಂದು ಕ್ರೋಧ ಇದ್ದೇ ಇದೆ. ಅವರೆಲ್ಲರೂ ಐರೋಪ್ಯ ದೇಶಗಳಲ್ಲಿ ಕಲಿತು ಬಂದವರು. ರಮೀಝ್ ಅಫ್ಘಾನಿನಲ್ಲಿ ಶೌಫಿಯಾ ಟ್ಯೂನ್ ನುಡಿಸಿದರೆ ಅದು ಎಲ್ಲರ ಗಮನ ಸೆಳೆಯುವಂತಿರುತ್ತದೆ. ಮತ್ತು ಅದುವೇ ಒಂದು ವಿಶೇಷ ಕಲೆ.

ತಾಲಿಬಾನಿಗಳು ಹೀಗೇಕೆ ಸಂಗೀತದ ವಿರುದ್ಧ ಮುರಕೊಂಡು ಬಿದ್ದಿದ್ದಾರೆಂದು ನೀವು ಅಚ್ಚರಿ ಪಡಬಹುದು. ತಾಲಿಬಾನಿಗಳಿಗೆ ಸಂಗೀತ ವೆಂದರೆ ಅದೇಕೆ ವಿರೋಧ? ಅದಕ್ಕೆ ಉತ್ತರ ಸಿಗುತ್ತಿಲ್ಲ, ಸಂಗೀತಕ್ಕೆ ಎಲ್ಲ ಶಕ್ತಿಯೂ ಇದೆ. ದೆಹಲಿಯ ಗದ್ದುಗೆಯಲ್ಲಿದ್ದ ಒಬ್ಬ ಸುಲ್ತಾನನಿಗೂ ಸಂಗೀತವೆಂದರೆ ರೇಜಿಗೆ ಇತ್ತಂತೆ. ಆತ ಅದೊಂದು ದಿನ ಯಾರೋ ಸತ್ತಿರುವ ಬಗ್ಗೆ ಮತ್ತು ಅವರ ಶವದ ಮೆರವಣಿಗೆಯನ್ನು ಕಂಡ. ಸತ್ತವನು ಯಾರೆಂದು ಆತ ಕೇಳುತ್ತಾನೆ. ಸೇವಕ ಹೇಳುತ್ತಾನೆ, ಹುಜೂರ್, ಸಂಗೀತಗಾರನೊಬ್ಬ ಸತ್ತು ಹೋಗಿದ್ದಾನೆ. ಆಗ ಸುಲ್ತಾನ ಹೇಳುತ್ತಾನೆ. ಆ ಶವವನ್ನು ಎಷ್ಟು ಸಾಧ್ಯವೋ ಅಷ್ಟು ಆಳದಲ್ಲಿ ಹೂಳಿಟ್ಟು ಬರುವಂತೆ ಹೇಳು, ಸಂಗೀತ ಮತ್ತೆ ಏದ್ದು ಬರುವುದು ಬೇಡ. ಆ ರಾಜನಿಗೆ ಸಂಗೀತವೆಅದರೆ ಅಷ್ಟರ ಮಟ್ಟಿಗಿನ ರೇಜಿಗೆ ಇತ್ತು. ಅದಕ್ಕೂ ಮುಂಚಿನ ರಾಜರು ಸಂಗೀತಕ್ಕೆ ಮನ್ನಣೆ ಕೊಡುತ್ತಿದ್ದರು. ತಮ್ಮ ರಾಜಾಂಗಣದಲ್ಲಿ ಸಂಗೀತಗಾರರಿಗೆ ಸಾಕಷ್ಟು ಧನಕನಕಗಳನ್ನೂ ಅವರು ಸುರಿಯುತ್ತಿದ್ದರು. ಈ ಸಂಗೀತಗಾರರು ಕ್ರಾಂತಿಕಾರಿಗಳಾಗಬಹುದೆ ಊಹೆ ಇದ್ದ ಕಾರಣ ಅವರೆಡೆಗೆ ಒಂದು ಬಗೆಯ ಅಸಹನೆ , ರೇಜಿಗೆ ಹುಟ್ಟಿಕೊಂಡಿತ್ತು. ಹಾಗಾಗಿ ಅಂತರ ಕಾಯ್ದುಕೊಳ್ಳುವ ನಿರ್ಧಾರವನ್ನು ಆಡಳಿತಗಾರರು ತೆಗೆದುಕೊಂಡಿದ್ದರು.

ಸಾಮಾಜಿಕವಾದ ಪ್ರಜ್ಞೆಯನ್ನು ಕಾಯ್ದುಕೊಳ್ಳುವಲ್ಲಿ ಯಾವತ್ತಿಗೂ ಸಂಗೀತ ತನ್ನದೇ ಆದ ಸ್ಥಾನವನ್ನು ಕಾಯ್ದುಕೊಂಡು ಬಂದಿದೆ. ವಂದೇ ಮಾತರಂ ಹಾಡನ್ನು ಉಚ್ಚರಿಸುವಲ್ಲೂ ಇದು ಜಾಗೃತವಾಗಿತ್ತು. 1882ರಲ್ಲಿ ಬಂಕಿಮಚಂದ್ರರು ಅದನ್ನು ಬರೆದಿದ್ದರು. ಕಾಂಗ್ರೆಸ್ ಹುಟ್ಟಿದ್ದು 1885 ರಲ್ಲಿ. ಕೋಲ್ಕತಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಹಮೇಂದ್ರ ಬಾಬು ವಂದೇ ಮಾತರಂ ಹಾಡನ್ನು ಹಾಡಿದ್ದರು. ಗುರುದೇವ ರಬೀಂದ್ರನಾಥ ಟಾಗೋರರು ಸಹ ಈ ಹಾಡನ್ನು ಮೆಚ್ಚಿದ್ದರು. 1905ರಲ್ಲಿ ಕಾಂಗ್ರೆಸ್ ಈ ಹಾಡನ್ನು ರಾಷ್ಟ್ರಗೀತೆ ಎಂದು ಗೌರವಿಸಿತ್ತು. ತಮಿಳು ಗೀತರಚನೆಕಾರ ಸುಬ್ರಹ್ಮಣ್ಯಂ ಭಾರತಿ ಅದನ್ನು ತೆಲುಗಿನಲ್ಲಿ ಭಾಷಾಂತರಿಸಿ ಹಾಡಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅದು ಪ್ರಮುಖ ಪಾತ್ರ ವಹಿಸಿತ್ತು. ಬ್ರಿಟಿಷರಿಗೆ ಅದು ತಲೆನೋವಿನ ಸಂಗತಿಯೂ ಆಗಿತ್ತು. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಮೇರಾ ರಂಗ್ ದೇ ಬಸಂತಿ ಚೋಲಾ ಹಾಡು ಕೂಡ ಜನಪ್ರಿಯವಾಗಿತ್ತು. ಆ ದಿನಗಳಲ್ಲಿ ಹೋರಾಟಗಾರರಾದ ರಾಮಪ್ರಸಾದ್ ಬಿಸ್ಮಿಲ್ ಈ ಹಾಡನ್ನು ರಚಿಸಿದ್ದರು. ಅದನ್ನವರು ಜೈಲಿನಲ್ಲಿ ಕುಳಿತೇ ಬರೆದಿದ್ದರು.

ನಮ್ಮ ಸ್ವಾತಂತ್ರ ಹೋರಾಟದ ಸಂದರ್ಭದಲ್ಲಿ ಹುಟ್ಟಿದ ಅದೆಷ್ಟೋ ಹಾಡುಗಳು ಇಂದಿಗೂ ಜೀವಂತವಾಗಿವೆ. ಜನಮನದ ಧಮನಿಗಳಲ್ಲಿ ಕಿಚ್ಚನ್ನು ಹಬ್ಬಿಸುವ ಶಕ್ತಿ ಸಂಗೀತಕ್ಕಿದೆ. ತ್ರಿವರ್ಣ ಧ್ವಜದ ಹಿನ್ನೆಲೆಯಲ್ಲಿ ಇಂತಹ ಹಾಡುಗಳನ್ನು ಆಲಿಸುವಾಗ ಅಲ್ಲೊಂದು ಧೈರ್ಯದ ಸೆಲೆ ನಮ್ಮನ್ನು ಆವರಿಸಿಕೊಳ್ಳುತ್ತದೆ. ನಮ್ಮ ಮೈಮನಗಳಲ್ಲಿ ಹೆಮ್ಮೆಯ ಭಾವ ಆವರಿಸಿಕೊಳ್ಳುತ್ತದೆ. ಭಾಷೆ ಯಾವುದೇ ಇರಲಿ, ಸಂಗೀತಕ್ಕೆ ಭಾಷೆಯ ಹಂಗಿಲ್ಲ, ಎಲ್ಲೆ ಗಡಿ-ಗುರುತುಗಳ ಹಂಗೂ ಇಲ್ಲ. ಆ ನೆಲೆಯಲ್ಲಿಯೇ ನಮ್ಮ ದೇಶದ ನಾಟು ನಾಟು ಹಾಡು ಆಸ್ಕರ್ ಪ್ರಶಸ್ತಿಯನ್ನು ಗೆದ್ದಿರುವುದು ಎಂಬುದರಲ್ಲಿ ಎರಡು ಮಾತಿಲ್ಲ. ಸಂತೋಷ ಮತ್ತು ದುಃಖವನ್ನು ಸಶಕ್ತವಾಗಿ ವ್ಯಕ್ತಪಡಿಸುವುದಕ್ಕೆ ಸಂಗೀತಕ್ಕಿಂತ ಅತ್ಯುತ್ತಮವಾದ ಮಾಧ್ಯಮ ಇನ್ನೊಂದಿಲ್ಲ. ಅದಕ್ಕಿರುವ ಶಕ್ತಿ ಅನಿಯಮಿತ. ತಾಲಿಬಾನಿಗಳಿಗೆ ಇದಿನ್ನೂ ಅರ್ಥವಾಗಲ್ಲ. ಅವರು ಸಂಗೀತದ ನಾದಮಾಧುರ್ಯವನ್ನು ಹುಟ್ಟಡಗಿಸುವುದಕ್ಕೆ ಸಾಧ್ಯವೇ ಇಲ್ಲ. ರಾಮಧ್ಯಾನ, ಕೃಷ್ಣನ ಮುರಳಿಯ ದನಿಯನ್ನು ಯಾರಾದರೂ ಮರೆಯಲು ಸಾಧ್ಯವೇ? ಸಂಗೀತವೆಂದರು ಅದು.

ಸಂಗೀತಕ್ಕಿರುವ ಶಕ್ತಿಯ ಬಗ್ಗೆ ನನಗೆ ಅಪಾರ ನಂಬುಗೆ ಇದೆ. ಹಾಗಾಗಿಯೇ ಲೋಕಮತ ಮಾಧ್ಯಮ ಸಮೂಹ ಸಂಗೀತವನ್ನು ಬೆಂಬಲಿಸುತ್ತದೆ, ಅದೊಂದು ಶಕ್ತಿ ಎಂದು ಪರಿಭಾವಿಸುತ್ತದೆ ಮತ್ತು ಜ್ಯೋತ್ಸ್ನಾ ಮ್ಯೂಸಿಕ್ ಅವಾರ್ಡ್ ಮೂಲಕ ಪ್ರತಿವರ್ಷ ಅರ್ಹ ಸಂಗೀತಗಾರರನ್ನು ಆಯ್ದು ಸಮ್ಮಾನಿಸುತ್ತದೆ. ಸಂಗೀತವೆಅದರೆ ಅದು ಬದುಕಿನ ಅವಿಭಾಜ್ಯ ಅಂಗ. ಸಂಗೀತವಿದ್ದಲ್ಲಿ ಜೀವಂತಿಕೆ ಇರುತ್ತದೆ. ಓ ಭಗವಂತಾ, ಅಫ್ಘಾನಿಸ್ತಾನದ ಆಡಳಿತಗಾರರಿಗೆ ಸಂಗೀತವೆಂದರೇನೆಂಬುದನ್ನು ದಯವಿಟ್ಟು ಅರ್ಥ ಮಾಡಿಸು.

ಟಿಪ್ಪು ಸುಲ್ತಾನನನ್ನು ಕೊಂದಿದ್ದು ಒಬ್ಬ ವೈದ್ಯ!

● ಡಾ ದಯಾನಂದ ಲಿಂಗೇಗೌಡ

ಭಾರತೀಯ ಚಿತ್ರರಂಗದಲ್ಲಿ 'ಮಾಸ್ಟರ್ ಪೀಸ್' ಎಂದೇ ಪರಿಗಣಿಸಲಾಗಿರುವ ಚಿತ್ರಗಳಲ್ಲಿ 'ಮೊಘಲ್ ಇ ಅಝುಮ್' ಚಿತ್ರ ಕೂಡ ಒಂದು. ಈ ಚಿತ್ರವನ್ನು ಚಿತ್ರೀಕರಿಸಲು ತೆಗೆದುಕೊಂಡಿದ್ದು ಬರೋಬ್ಬರಿ ಹದಿನಾರು ವರ್ಷಗಳು. ಚಿತ್ರೀಕರಣ ಪ್ರಾರಂಭವಾದಾಗ ಅವಿವಾಹಿತನಾಗಿದ್ದ ನಿರ್ದೇಶಕ ಕೆ. ಆಸಿಫ್, ಚಿತ್ರ ಬಿಡುಗಡೆಯಾದಾಗ ಮದುವೆಯಾಗಿ ಮೂರು ಮಕ್ಕಳ ತಂದೆಯಾಗಿದ್ದ. ಅಷ್ಟು ಸುದೀರ್ಘವಾಗಿ ಸಮಯವನ್ನು ತೆಗೆದುಕೊಂಡ ಪರಿಶ್ರಮ ತೆರೆಯ ಮೇಲೆ ಖಂಡಿತ ಕಾಣುತ್ತಿತ್ತು. ಆ ಚಿತ್ರದ ಚಿತ್ರಕಥೆ, ಸಂಭಾಷಣೆ, ಹಾಡುಗಳು, ಚಿತ್ರೀಕರಣ ಒಂದಕ್ಕಿಂತ ಒಂದು ಅದ್ಭುತವೇ ಸರಿ. ಆ ಚಿತ್ರದಲ್ಲಿ ಬರುವ ಸಲೀಂ ಮತ್ತು ಅನಾರ್ಕಲಿ ಪಾತ್ರಗಳು ಚಿರಸ್ಮರಣೀಯ. ಹಣ, ಅಂತಸ್ತು, ಜಾತಿ ಧರ್ಮಗಳನ್ನು ಮೀರಿದ ಈ ಪ್ರೇಮಿಗಳು, ಎಲ್ಲ ಕಾಲಕ್ಕೂ ಆದರ್ಶ ಪ್ರೇಮಿಗಳಾಗಿ ಉಳಿದುಕೊಳ್ಳುವಂತೆ ಸೃಷ್ಟಿಸಲಾಗಿತ್ತು. ಆ ಚಿತ್ರ ನೋಡಿದ ನಂತರ ಸಲೀಂ ಮತ್ತು ಅನಾರ್ಕಲಿಗಳಂತೆ ತಾವು ಪ್ರೇಮಿಸಬೇಕು ಎಂಬುದು ಪ್ರತಿಯೊಬ್ಬ ಪ್ರೇಮಿಗಳ ಕನಸಾಗಿಸಿತ್ತು. ಅವರ ಪ್ರೇಮ, ಪ್ರತಿಯೊಬ್ಬ ಪ್ರೇಮಿಗಳಿಗೂ ಒಂದು ಆದರ್ಶವಾಗಿತ್ತು. ಈ ಭಾವನೆಗೆ ಇನ್ನೊಂದು ಬಲವಾದ ಕಾರಣವಿತ್ತು. ಈ ಪಾತ್ರಗಳು ರೋಮಿಯೋ ಜೂಲಿಯೆಟ್ ರೀತಿ, ಕಾಲ್ಪನಿಕ ಪಾತ್ರ ವಾಗಿರದೇ ಇತಿಹಾಸದ ಒಂದು ಭಾಗವಾಗಿರುವುದರಿಂದ, ಆ ಪ್ರೇಮಿಗಳ ಕತೆಗೆ ಹೆಚ್ಚಿನ ತೂಕ.

ಸಾಮಾನ್ಯ ಜನರಲ್ಲಿ ಸಲೀಮ್ ಅನಾರ್ಕಲಿ ಆದರ್ಶ ಪ್ರೇಮದ ಬಗ್ಗೆ ಸದ್ಭಾವನೆ ತೀರಾ ಇತ್ತೀಚೆಗೆ ಬಿಡುಗಡೆಯಾದ 'ತಾಜ್' ಎಂಬ ವೆಬ್ ಸೀರೀಸ್ ಬರುವವರೆಗೂ ಹಾಗೆ ಉಳಿದುಕೊಂಡಿತ್ತು. ಇವರ ಪ್ರೇಮ ಕಥೆಗೆ ಇನ್ನೊಂದು ಒಂದು ಕೋನವಿರಬಹುದು ಎಂಬ ಸಣ್ಣ ಅನುಮಾನವೂ ಜನರಲ್ಲಿ ಮೂಡದಂತೆ ಮೊದಲು ಪರಿಸರ ಸೃಷ್ಟಿ ಮಾಡಲಾಗಿತ್ತು. ಈ ಕಥೆಗೆ ಮತ್ತೊಂದು ಕೋನದ ದೃಷ್ಟಿಕೋನವಿದೆ ಎಂದು ಸರಣಿ ನೋಡಿದ ಜನರು ಆಘಾತಕ್ಕೆ ಒಳಗಾದರು. ಇದರಲ್ಲಿ ಅನಾರ್ಕಲಿಯನ್ನು ಅಕ್ಬರನ ಅನಧಿಕೃತ ಪತ್ನಿ ಎಂಬ ವಿವರ ಬಯಲಾಗಿತ್ತು. ಅಪ್ಪನ ಪ್ರೇಮಿಯಾದ ಅನಾರ್ಕಲಿಯನ್ನೇ, ಅಕ್ಬರನ ಮಗನಾದ ಸಲೀಂ ಪ್ರೇಮಿಸುವುದೇ ಒಂದು ರೋಚಕ ಕಥೆ. ಅತ್ಯಂತ ಶಕ್ತಿಶಾಲಿಯಾಗಿದ್ದ ಅಕ್ಬರ್, ಈ ತ್ರಿಕೋನ ಪ್ರೇಮಕಥೆಯಲ್ಲಿ ಮುಜುಗರದ ಮಧ್ಯೆ ಮೇಲುಗೈ ಸಾಧಿಸುತ್ತಾನೆ. ಮೊದಲು ಕೇಳಿದ ಕತೆಗೆ ಯಾವುದೇ ವ್ಯತ್ಯಾಸವಾಗದಂತೆ, ಈ ಕಥೆಯ ಇನ್ನೊಂದು ಮುಖವನ್ನು ತೋರಿಸಿರುವುದೇ ಈ ವೆಬ್ ಸರಣಿ ಯ ವಿಶೇಷ.

ಸಮಗ್ರ ದೃಷ್ಟಿಕೋನದಿಂದ ಇವರ ಕಥೆಗಳನ್ನು ನೋಡಿದಾಗ ಅನಾರ್ಕಲಿ ಮತ್ತು ಸಲೀಂ ಆದರ್ಶಗಳು ಪ್ರೇಮಿಗಳಾಗಿ ಉಳಿದುಕೊಳ್ಳುವುದಿಲ್ಲ. ಒಬ್ಬರ ವಿಷಯವನ್ನು ಮತ್ತೊಬ್ಬರಿಗೆ ತಿಳಿಸದೇ, ಅಪ್ಪ-ಮಗನನ್ನು ಏಕಕಾಲದಲ್ಲಿ ನಿಭಾಯಿಸುವ ಅನಾರ್ಕಲಿ ಒಂದು ವಿಚಿತ್ರವಾಗಿಯೇ ಕಾಣಿಸುತ್ತಾಳೆ. ಅಪ್ಪನ ಪ್ರೇಮಿಯನ್ನು, ಪ್ರೀತಿಸುವ ಸಲೀಮನ ಬಿಸಿರಕ್ತ ಅರ್ಥಮಾಡಿಕೊಳ್ಳುವಲ್ಲಿ ಕಷ್ಟವಾಗುವುದಿಲ್ಲ. ರಾಜ್ಯ-ರಾಜ್ಯಭಾರ-ಅಧಿಕಾರ ಇವುಗಳೇ ಪ್ರಮುಖವಾಗಿದ್ದ ಮೊಗಲ್ ರಾಜರಿಗೆ, ಹೆಂಗಸರೆಂಬುದು ಯಾವ ವಿಶೇಷ ಮುಖ್ಯ ಸಂಗತಿಯೂ ಅಲ್ಲ ಎಂಬ ಭಾವನೆ ಮೂಡುವುದು ಸಹಜ. ಕಾನೂನು ಕ್ರಮದಿಂದ ಪಾರಾಗಲು ಇದೊಂದು ಕಾಲ್ಪನಿಕ ಕತೆ ಎಂದು ನಿರ್ದೇಕರು ಹೇಳಿಕೊಂಡಿದ್ದಾರೆಯಾದರೂ, ಸೂಕ್ಷ್ಮಾತಿಸೂಕ್ಷ್ಮ ವಿವರಣೆಗಳು ಇರುವುದರಿಂದ, ಇದರಲ್ಲಿ ಅಧ್ಯಯನ ಅಡಕವಾಗಿರುವುದು ಮೇಲ್ನೋಟಕ್ಕೆ ಕಾಣುತ್ತದೆ. ಏನೇ ಹೇಳಿ, ಕಥೆಯ ಒಂದು ಮುಖವನ್ನು ಮುಚ್ಚಿಟ್ಟು ಓದಿದಾಗ ಬರುವ ಭಾವನೆಗಳಿಗೂ, ಕಥೆಯನ್ನು ಎಲ್ಲ ದೃಷ್ಟಿಕೋನದಲ್ಲಿ ನೋಡಿದಾಗ ಮೂಡುವ ಭಾವನೆಗಳು ಇದು ಅಜಗಜಾಂತರ.

ಶಹಜಹಾನ್‌ನ ಚರಿತ್ರೆಯನ್ನು ನೋಡಿದಾಗಲೂ, ನಿಜವಾಗಲೂ ಇತಿಹಾಸಕಾರರು ಹೇಳಿದ ಹಾಗೆ 'ಈ ತಾಜ್ ಮಹಲ್ ಒಂದು ಪ್ರೇಮದ ಸಂಕೇತವಾ?' ಎಂದು ಅನುಮಾನ ಮೂಡುತ್ತದೆ. ಷಹಜಹಾನ್‌ನ ಏಳು ಅಧಿಕೃತ ಪತ್ನಿಯರಲ್ಲಿ ಮುಮತಾಜ್ ಕೂಡ ಒಬ್ಬಳು. 14ನೇ ಹೆರಿಗೆಯಲ್ಲಿ ರಕ್ತಸ್ರಾವದಿಂದ ಮಮ್ತಾಜಳು ಮರಣ ಹೊಂದುತ್ತಾಳೆ. ಆನಂತರ ಅವಳ ಸಹೋದರಿಯನ್ನು ಮದುವೆಯಾಗುತ್ತಾನೆ ಶಹಜಹಾನ್. ಅವರ ಮಗಳಾದ ಜಹಾನರ ಮತ್ತು ಷಹಜಹಾನ್ ಬಗ್ಗೆಯೂ ಹಲವಾರು ಕಥೆಗಳಿವೆ. ಮಗಳನ್ನು ಮದುವೆ ಮಾಡಿಕೊಡದೆ, ಅವಳು ಬದುಕಿ ಇರುವವರೆಗೂ ಷಹಜಹಾನ್‌ನ ಅರಮನೆಯಲ್ಲೇ ಇದ್ದುದ್ದಕ್ಕೆ ಇದೂ ಒಂದು ಕಾರಣ ಎಂದು ಹೇಳಲಾಗುತ್ತದೆ. ಇಂತಹ ಷಹಜಹಾನ್ ನಿಜವಾಗಲೂ ಪ್ರೇಮದ ಸಂಕೇತವಾಗಿ ತಾಜ್ ಮಹಲ್ ಕಟ್ಟಿಸಿದನೋ ಅಥವಾ ಇದಕ್ಕೆ ಬೇರೇನೋ ಕತೆಗಳಿಯಿವೆಯೋ ಗೊತ್ತಿಲ್ಲ. ತಾಜ್ ಮಹಲಿನ ನೆಲಮಾಳಿಗೆಯಲ್ಲಿ ಏನಿದೆ ಎಂಬುದನ್ನ ಇದುವರೆಗೂ ಗುಪ್ತವಾಗಿಸಿರುವುದು ಮತ್ತು ಸ್ವಾತಂತ್ರ್ಯ ನಂತರ ತಾಜ್ ಮಹಲಿನ ಹಿಂಬಾಗಿಲನ್ನು ಶಾಶ್ವತವಾಗಿ ಕಲ್ಲುಗಳಿಂದ ಮುಚ್ಚಿರುವುದು ಸಾಕಷ್ಟು ಅನುಮಾನಗಳಿಗೆ ಎಡೆಮಾಡಿಕೊಡುತ್ತದೆ.

ಇಂತಹ ವಿವಾದಕ್ಕೆ ಇತ್ತೀಚೆಗೆ ಸೇರಿಕೊಂಡಿರುವುದು ಟಿಪ್ಪು ಸುಲ್ತಾನನ ಸಾವು. ನಮ್ಮೆಲ್ಲರಿಗೂ ಶಾಲೆಗಳಲ್ಲಿ ತಿಳಿಸಿರುವಂತೆ ಟಿಪ್ಪು ಸುಲ್ತಾನನ ಸಾವು, ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಆಗಿರುವುದು ತಿಳಿದು ಬರುತ್ತದೆ. ಆದರೆ ಅವನನ್ನು ಕೊಂದವರು ಯಾರು ಎಂಬುದರ ಬಗ್ಗೆ ಹಲವಾರು ಗೊಂದಲಗಳಿವೆ. ಕೆಲವೊಂದು ಸ್ಥಳಗಳಲ್ಲಿ ಅನಾಮಧೇಯ ಯೋಧರು ಟಿಪ್ಪು ಸುಲ್ತಾನನನ್ನು ಕೊಂದರು ಎಂದು ದಾಖಲಾಗಿದ್ದರೆ, ಬ್ರಿಟಿಷ್ ಇತಿಹಾಸಕಾರರನ್ವಯ ಹ್ಯಾರಿಸ್ ಹಾರಿಸಿದ ಗುಂಡಿನಿಂದ ಸುಲ್ತಾನನ ಸಾವು ಎಂದು ಹೇಳಲಾಗಿದೆ.

ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನನ ಆಡಳಿತದ ವಿರುದ್ಧ ಬಂಡೆದ್ದಿದ್ದ ಒಕ್ಕಲಿಗ ಸಮುದಾಯದ ಕಾಣಿಕೆ ಬಗ್ಗೆ ನಾವು ಇತಿಹಾಸದಲ್ಲಿ ಕೇಳಿದ್ದು ಕಡಿಮೆ. ಇಂದಿಗೂ ಅತಿ ಹೆಚ್ಚು ಕನ್ನಡ ಮಾತನಾಡುವ ಜಿಲ್ಲೆ ಎಂದೇ ಹೆಸರಾಗಿರುವ ಮಂಡ್ಯದ ಒಕ್ಕಲಿಗ ಜನರಿಗೆ ಪರ್ಷಿಯನ್ ಹೇರಿಕೆ ಸಿಟ್ಟಿಗೆಬ್ಬಿಸುವುದು ಸಹಜ. ಆದರೆ ದೇಜವರೇಗೌಡರ 'ಸುವರ್ಣ ಮಂಡ್ಯ' ಎಚ್‌ಎಲ್ ನಾಗೇಗೌಡರ 'ಪ್ರವಾಸಿ ಕಂಡ ಇಂಡಿಯಾ' ಇವುಗಳಲ್ಲಿ ಒಕ್ಕಲಿಗರ ಕಾಣಿಕೆಯನ್ನು ತಿಳಿಸಿರುವುದು ಮುನ್ನಲೆಗೆ ಬಂದಿದೆ. ರಾಜ ಮಾತೆ ರಾಣಿ ಲಕ್ಷ್ಮಮ್ಮಣ್ಣಿ ಅವರ ಗೆಜೆಟಿಯರ್‌ಗಳಲ್ಲಿ ಉರಿಗೌಡ ಮತ್ತು ದೊಡ್ಡನಂಜೇಗೌಡ ಇವರ ಹೆಸರು ಇರುವುದರಿಂದ ವ್ಯಕ್ತಿಗಳು ಕಾಲ್ಪನಿಕ ಪಾತ್ರವಲ್ಲ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಮೈಸೂರು ಸಂಸ್ಥಾನದ ಬಗ್ಗೆ ಬರುವ ಲಾವಣಿಗಳಲ್ಲಿ 'ಅರಮನೆ ಬಿಲವ ಹೊಕ್ಕಿ, ಗುದ್ದಿ ಗುದ್ದಿ ಕೊಂದರು' ಎನ್ನುವ ಪದಗಳು ಯಾರನ್ನು ಉದ್ದೇಶಿಸಿದ್ದು? ಎಂದು ಜನರು ಕೇಳುತ್ತಿದ್ದಾರೆ. ಟಿಪ್ಪು ಸುಲ್ತಾನನಂತಹ ಮಹತ್ವದ ವ್ಯಕ್ತಿಯ ಸಾವಿನ ಬಗ್ಗೆ ನಮ್ಮ ಸ್ಥಳೀಯ ಇತಿಹಾಸಕಾರರು ಹೆಚ್ಚಿನ ಗಮನ ಕೊಡದಿರುವುದೇ ಒಂದು ಸೋಜಿಗವೇ ಸರಿ. ಈ ಇದರ ಬಗ್ಗೆ ಇತಿಹಾಸಕಾರರು ಹೆಚ್ಚು ಮಾತನಾಡದೆ ಬರಿ, ರಾಜಕಾರಣಿಗಳು ಹೊಡೆದಾಡುತ್ತಿರುವುದರಿಂದ ಗೊಂದಲವೇ ಹೆಚ್ಚಾಗುತ್ತದೆ.

ಟಿಪ್ಪು ಸುಲ್ತಾನನ್ನು ಕೊಂದವರು ಯಾರು ಎಂಬುದರ ಬಗ್ಗೆ ಕರ್ನಾಟಕದಲ್ಲಿ ವಿವಾದ ನಡೆಯುತ್ತಿರುವ ಸಮಯದಲ್ಲಿ, ಕೇರಳದಲ್ಲಿ ವೈದ್ಯರು, ಆಸ್ಪತ್ರೆಗಳ ಮೇಲಿನ ದಾಳಿಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಕೇರಳದಲ್ಲಿ ಸುಮಾರು ಮುನ್ನೂರಕ್ಕೂ ಹೆಚ್ಚು ದಾಳಿ ಪ್ರಕರಣಗಳು ಕಳೆದ ವರ್ಷ ದಾಖಲಾಗಿದ್ದರೂ, ಯಾವುದೇ ಪ್ರಕರಣದಲ್ಲಿ ಪೊಲೀಸರು ಕ್ರಮ ಜರುಗಿಸದೇ ಇರುವುದು ವೈದ್ಯರ ಆಕ್ರೋಶಕ್ಕೆ ಕಾರಣವಾಗಿದೆ. ಇತ್ತೀಚೆಗೆ ನಡೆದ ಪ್ರಕರಣದಲ್ಲಿ ಸತ್ತು ಜನಿಸಿದ (ಜನಿಸುವಾಗ ಮರಣ ಹೊಂದಿದ್ದಲ್ಲ) ಮಗುವಿನ ಪ್ರಕರಣದಲ್ಲಿ ವೈದ್ಯರ ಮತ್ತು ಅವರ ಪತಿಯ ಮೇಲೂ ದಾಳಿ ನಡೆದಿದೆ. ವೈದ್ಯರ ಮೇಲಿನ ದಾಳಿಗಳನ್ನು ರಾಜಕಾರಣಿಗಳು ಸಮರ್ಥಿಸಿಕೊಳ್ಳುತ್ತಿರುವುದು, ವೈದ್ಯರಿಗೆ ತಕ್ಕ ಶಾಸ್ತಿಯಾಯಿತು ಎಂದು ದಾಳಿಮಾಡಿದವರನ್ನು ರಕ್ಷಿಸುತ್ತಿರುವುದು ವೈದ್ಯರ ಆಕ್ರೋಶಕ್ಕೆ ಕಾರಣವಾಗಿದೆ. ಎಲ್ಲ ಸಾವಿಗೂ ವೈದ್ಯರೇ ಕಾರಣವೇ, ವೈದ್ಯ ಹಸ್ತಕ್ಷೇಪವಿಲ್ಲದಿದ್ದರೆ ಸಾವೇ ಸಂಭವಿಸುವುದಿಲ್ಲವೇ ಎಂಬ ಪ್ರಶ್ನೆಯನ್ನು ವೈದ್ಯರು ಕೇಳುತ್ತಿದ್ದಾರೆ. ರಾಜಕಾರಣಿಗಳೇ ಅನಗತ್ಯವಾಗಿ ದೂರವಾಣಿ ಕರೆ ಮಾಡಿದರೆಂದು ಜನರನ್ನ ಬಂಧಿಸಿದ ಪ್ರಕರಣ ನೋಡಿದ್ದೇವೆ. ವಿಮಾನದಲ್ಲಿ ಮೂತ್ರಮಾಡಿದ ಎಂದು ಆರೋಪಕ್ಕೆ ವಿಚಾರಣೆಯಿಲ್ಲದೆ ಬಂಧಿಸುವುದನ್ನು ಕಂಡಿದ್ದೇವೆ. ಆದರೆ ವೈದ್ಯರ ಮೇಲಿನ ಪ್ರಾಣಾಂತಿಕ ದಾಳಿಗೂ ಯಾವುದೇ ಕಾಳಜಿ ತೋರದ ವ್ಯವಸ್ಥೆ ಬಗ್ಗೆ ವೈದ್ಯ ಸಮುದಾಯ ರೋಸಿ ಹೋಗಿರುವು ಮಾತ್ರ ಸತ್ಯ. ವೈದ್ಯರ ಜೀವದ ಬಗ್ಗೆ ಕಿಂಚಿತ್ತೂ ಕಾಳಜಿ ತೋರದ ಸಮಾಜ, ಜನರ ಪ್ರಾಣವನ್ನು ವೈದ್ಯರು ರಕ್ಷಿಸಬೇಕು ಎಂದು ನಿರೀಕ್ಷಿಸುವುದೇ ಒಂದು ವಿಪರ್ಯಾಸ !

ಕೊನೆಮಾತು: ಟಿಪ್ಪು ಸುಲ್ತಾನನ ಈಗೇನಾದರೂ ಮೃತಪಟ್ಟಿದ್ದರೆ, ಅದನ್ನ ಸುಲಭವಾಗಿ ವೈದ್ಯರ ತಲೆಗೆ ಕಟ್ಟಬಹುದಿತ್ತು. ಯುದ್ಧದಲ್ಲಿ ಗಾಯಗೊಂಡ ಟಿಪ್ಪುವನ್ನು ಆಸ್ಪತ್ರೆಗೆ ದಾಖಲಿಸಿದರೂ, ವೈದ್ಯರ ಅಸಾಮರ್ಥ್ಯದಿಂದ ಸಾವು ಸಂಭವಿಸಿದೆ ಎಂದು ಹೇಳುತ್ತಿದ್ದರೋ ಏನೋ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: **VISHWESHWAR BHAT**, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : **Vishweshwar Bhat.** ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:8, Issue:89